ನಮ್ಮ ಲಲಿತ ಕಲಾರಂಗ ಹಾಗೂ ಮಹಿಳಾ ವೃತ್ತಿ ರಂಗ ಕಲಾವಿದರ ಸಂಘಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದರು. ಸಾಕ್ಷರತೆ, ಆರೋಗ್ಯ, ಪರಿಸರ ರಕ್ಷಣೆ ಕುರಿತಾದ ಸಾಕಷ್ಟು ಬೀದಿ ನಾಟಕಗಳನ್ನು ಮಾಡಿದೆವು. ಸಂಘಟಕಿಯಾಗಿ, ನಿರ್ದೇಶಕಿಯಾಗಿ, ನಟಿಯಾಗಿ ಸಾಕಷ್ಟು ಅನುಭವ ಪಡೆದೆ. ಆದರೆ ಹವ್ಯಾಸಿ ರಂಗಭೂಮಿಯಲ್ಲಿ ಮಾತುಗಾರಿಕೆಗೂ, ಹಾಡುಗಾರಿಕೆಗೂ, ವೃತ್ತಿ ಮತ್ತು ಹಳ್ಳಿಗಾಡಿನ ನಾಟಕದಲ್ಲಿಯ ಮಾತುಗಾರಿಕೆಗೂ ಅಭಿನಯದ ಪಾತ್ರಗಳಲ್ಲಿ ಸ್ವರೂಪ ಬೇರೆಯಾದರೂ ಆಶಯ ಒಂದೇ ಎಂದೇ.

◆ **'ಸುಧಾ' ಪತ್ರಿಕೆಯಲ್ಲಿ ಪ್ರಕಟವಾದ ನಿಮ್ಮ ಆತ್ಮಕತೆ ಮೂಲಕ ನೀವು ಇತರರಿಗಿಂತ ಬೇಗ ಗುರುತಿಸಿಕೊಳ್ಳಲು ಸಾಧ್ಯವಾಯಿತಲ್ಲವೆ?**

ಹೌದು. ಖಂಡಿತಾ 'ಸುಧಾ' ಪತ್ರಿಕೆಗೆ, ಸಂಪಾದಕರಿಗೆ ನಾನು ಜೀವನ ಪರ್ಯಂತ ಋಣಿಯಾಗಿರುವೆ. ನನ್ನ ಖಾಸಗಿ ಬದುಕು ಹಾಗೂ ವೃತ್ತಿ ಅನುಭವಗಳ ಕುರಿತು ಗುಡಿಹಳ್ಳಿ ನಾಗರಾಜ ಅವರು ಬರೆದ 'ನನ್ನ ನಾ ಕಂಡಂತೆ' ಶೀರ್ಷಿಕೆಯಡಿ ಧಾರಾವಾಹಿಯಾಗಿ 1996ರಲ್ಲಿ 19 ವಾರಗಳ ಕಾಲ ಪ್ರಕಟವಾಯಿತು. ಇದರಿಂದ ನನ್ನ ಜೀವನ ಗಾಥೆಯೂ ಓದುಗರಿಗೆ ಪರಿಚಿತವಾಯಿತು. ಮುಂದೆ ಹಂಪಿ ವಿಶ್ವವಿದ್ಯಾಲಯದಿಂದ ಈ ಧಾರಾವಾಹಿಯನ್ನೇ ಎಂ.ಎಂ. ಕಲಬುರ್ಗಿಯವರು 'ಮರಿಯಮ್ಮನಹಳ್ಳಿ ರಂಗಸಿರಿ' ಹೆಸರಿನಿಂದ ಕೃತಿ ಪ್ರಕಟಿಸಿದರು. ಅದು ಈಗ ಮೂರನೇ ಮುದ್ರಣ ಕಂಡಿದೆ. ಹವ್ಯಾಸಿ ಸೇರಿದಂತೆ ನಾಡಿನ ಬಹುತೇಕ ರಂಗಾಸಕ್ತರು ನನ್ನನ್ನು ಬಹುಬೇಗ ಗುರುತಿಸಿದರು. ಅಷ್ಟೇ ಅಲ್ಲ, ನಾಡಿನ ಅನೇಕ ಪತ್ರಿಕೆಗಳಲ್ಲಿ ನನ್ನ ಬಗೆಗಿನ ಬರಹಗಳನ್ನು ಪ್ರಕಟಿಸಿದರು. ಆ ಎಲ್ಲ ಲೇಖಕರನ್ನು ನೆನೆಯುವೆ. ನನ್ನನ್ನು ಜನ ಗುರ್ತಿಸಲು ಕಾರಣೀಕರ್ತರಾದವರು ನಮ್ಮ ಕನ್ನಡ ನಾಡಿನ ಮಾಧ್ಯಮದವರು. ಒಂದು ಹಳ್ಳಿಯಲ್ಲಿ ಆಡಿದ ನಾಟಕಗಳು ಪ್ರಚಾರ ಪಡೆಯಲು ಸಹಾಯ ಮಾಡಿದವರೇ ಮಾಧ್ಯಮದವರು.

◆ **ಮಹಿಳಾ ವೃತ್ತಿ ರಂಗ ಕಲಾವಿದರ ಸಂಘ ಸ್ಥಾಪಿಸುವುದೇ ಕಷ್ಟ. ಇನ್ನು ಮುನ್ನಡೆಸಿ ನಾಟಕಗಳನ್ನು ಪ್ರಯೋಗಿಸುವಲ್ಲಿ ಸಫಲರಾದಿರಿ. ಮತ್ತೆ ಈ ಸಂಘದಿಂದ ಹಮ್ಮಿಕೊಂಡಿರುವ ಚಟುವಟಿಕೆಗಳಾವವು. ಇದರಿಂದ ರಂಗಾಸಕ್ತರು ಪ್ರಯೋಜನ ಪಡೆಯುವಂತಾಯಿತೆ?**

ನಿರಂತರವಾಗಿ ನಾಟಕಗಳ ಸಿದ್ಧತೆ, ಪ್ರದರ್ಶನ, ಉತ್ಸವ, ಶಿಬಿರಗಳನ್ನು ಸಂಘಟಿಸುತ್ತ ಬಂದಿದ್ದೇನೆ. ಹಳ್ಳಿಗಾಡಿನಲ್ಲಿ ನಟಿಸುವ ವೃತ್ತಿ ಕಲಾವಿದೆಯರಿಗಾಗಿ ಶಿಬಿರಗಳನ್ನು ಏರ್ಪಡಿಸಿದ್ದೇನೆ. ಶಾಕುಂತಲಾ, ಪ್ರಮೀಳಾ ರಾಜ್ಯ, ಹಸಿರುಬಳೆ, ನಾರದ ವಿನೋದ, ಮೋಹಿನಿ ಭಸ್ಮಾಸುರ, ಮಣಿಪುರ, ಹೂ ಹುಡುಗಿ, ರೊಚ್ಚಿಗೆದ್ದ ರೈತ, ಕಿಸಾಗೌತಮಿ ಮುಂತಾದವು ಸಂಘ ಸಿದ್ಧಪಡಿಸಿ ಪ್ರದರ್ಶಿಸಿದ ಕೆಲವು ನಾಟಕಗಳು. ಮಾ.ಬ.ಸೋಮಣ್ಣ, ಸುಭದ್ರಮ್ಮ ಮನ್ಸೂರು ಮುಂತಾದವರು ನಾಟಕ ತರಬೇತಿ, ರಂಗಗೀತೆಗಳ ಶಿಬಿರ ನಡೆಸಿಕೊಟ್ಟಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಚಂದ್ರಶೇಖರ ಕಂಬಾರ, ಎಂ.ಎಂ.ಕಲಬುರ್ಗಿ, ಹಿ.ಚಿ. ಬೋರಲಿಂಗಯ್ಯ, ಮಲ್ಲಿಕಾ ಘಂಟಿ ಸೇರಿದಂತೆ ಹಲವು ವಿದ್ವಾಂಸರು, ಲೇಖಕರು ನಮ್ಮ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ನಮ್ಮ ಸಂಘದಲ್ಲಿ ತರಬೇತಿ ಪಡೆದ, ನಟಿಸಿದ ಯುವಕ-ಯುವತಿಯರು, ವಿದ್ಯಾರ್ಥಿಗಳು ಮುಂದೆ ನೀನಾಸಂ ತಿರುಗಾಟ, ಸಾಣೇಹಳ್ಳಿ ಶಿವಸಂಚಾರ ತಂಡಗಳಲ್ಲಿ ದೊಡ್ಡ ನಟರಾಗಿ ಬೆಳೆದಿದ್ದಾರೆ. ಸ್ವತಂತ್ರವಾಗಿ ನಾಟಕ ತಂಡಗಳನ್ನು ಕಟ್ಟಿಕೊಂಡು ಕ್ರಿಯಾಶೀಲರಾಗಿದ್ದಾರೆ.

ನಮ್ಮ ತಂಡದ ಜೊತೆಗೆ ಇನ್ನೂ ಕೆಲವು ರಂಗ ತಂಡಗಳು ನಮಗೆ ಅವಕಾಶ ಕಲ್ಪಿಸಿದ್ದನ್ನು ನಾನಿಲ್ಲಿ ಸ್ಮರಿಸಬೇಕು. ಎಂ.ಪಿ. ಪ್ರಕಾಶ ಸರ್ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾಗಿದ್ದಾಗ ಸಂಗ್ಯಾ ಬಾಳ್ಯಾ, ಜೋಕುಮಾರ ಸ್ವಾಮಿ ನಾಟಕಗಳನ್ನು ಸುಭದ್ರಮ್ಮ ಮನ್ಸೂರು, ಮಧುರಾ ಹೊಸಪೇಟೆ, ಕೂಡ್ಲಿಗಿ ಪದ್ಮಾ, ನಾನು ಹೂವಿನಹಡಗಲಿ 'ರಂಗಭಾರತಿ' ತಂಡದಿಂದ ಆಡಿದ್ದೇವೆ. ನಾವೆಲ್ಲ ಬೆಂಗಳೂರು ಮತ್ತು ದೆಹಲಿಗೂ ಹೋಗಿ ನಾಟಕ ಮಾಡಿದೆವು. ಹೆಚ್ಚು ಪ್ರೋತ್ಸಾಹವನ್ನು ಕೊಟ್ಟ ಎಂ.ಪಿ. ಪ್ರಕಾಶ ಸರ್ ಅವರನ್ನು ಸದಾ ನೆನೆಯುವೆ. ಕನ್ನಡ ಕಲಾ ಸಂಘ ಹೊಸಪೇಟೆ ಇವರಿಂದ ಬಾಂಬೆ ಕನ್ನಡ ಕಲಾ ಸಂಘದವರು ನಡೆಸುತ್ತಿದ್ದ ಕಂಬಾರರ 'ನಾಯಿ ಕಥೆ' ನಾಟಕ ಆಡಿದಾಗ ಒಳ್ಳೆಯ ಹೆಸರು ಬಂತು.